# ನ್ಯಾಷನಲ್ ಪಬ್ಲಿಕ್ ಶಾಲೆ

ಕೆಂಗೇರಿ, ಬೆಂಗಳೂರು



## ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದ ವರದಿ



**ನೀರ ಕಂಡರೆ ಮುಳುಗುವರಯ್ಯ**
**ಮರವ ಕಂಡರೆ ಸುತ್ತುವರಯ್ಯ**
**ಬತ್ತುವ ಜಲವ, ಒಣಗುವ ಮರವ ನಂಬುವರು**
**ನಿಮ್ಮನೆತ್ತ ಬಲ್ಲರಯ್ಯ**
**ಕೂಡಲಸಂಗಮದೇವ**

೨೦೨೩-೨೪ ನೇ ಸಾಲಿನಲ್ಲಿ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು "ವಚನ ವೈಭವ" ಎಂಬ ಶೀರ್ಷಿಕೆಯೊಂದಿಗೆ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ **ಶ್ರೀಮತಿ. ಗೀತಾ ದೀಕ್ಷಿತ್** ರವರು ವಹಿಸಿದ್ದರು.

ಸಹಸಂಯೋಜಕರಾದ ಶ್ರೀಮತಿ.ಗೀತಾ ರವರು, ಕನ್ನಡ ಭಾಷಾ ವಿಭಾಗದ ಮುಖ್ಯಸ್ಥರಾದ ಶ್ರೀಮತಿ. ಸುಧಾ ರವರು ಹಾಜರಿದ್ದರು. ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ವಿದ್ಯಾರ್ಥಿಗಳು ಬಸವಣ್ಣ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ನೀಲಾಂಬಿಕೆ ಇತ್ಯಾದಿ ವಚನಕಾರರ ವೇಷಗಳನ್ನು ಧರಿಸಿದ್ದರು. ಬಸವಣ್ಣನವರ ಮೇಲೆ ಹರಳಯ್ಯನಿಗಿದ್ದ ಭಕ್ತಿಯನ್ನು ಕುರಿತಾದ ನೃತ್ಯರೂಪಕ, ಏಕಪಾತ್ರಾಭಿನಯ ಹಾಗು ಕೆಲವು ವಚನಗಳನ್ನು ಸಹ ಹಾಡಲಾಯಿತು.

ಇದಕ್ಕೂ ಮೊದಲು ನವೆಂಬರ್ ೨ ರಿಂದ ೯ ನೇ ತಾರೀಕಿನವರೆಗೂ ಕನ್ನಡ ಭಾಷೆಯಲ್ಲಿ ಪ್ರಾರ್ಥನಾಸಭೆಯನ್ನು ನಡೆಸಲಾಯಿತು. ಪ್ರತಿಜ್ಞೆ, ನುಡಿಮುತ್ತು, ವಾರ್ತೆಗಳು ಹಾಗು ದಿನಕ್ಕೊಂದು ವಿಶೇಷ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಹೀಗೆ ೬೮ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಬಹಳ ಸಡಗರ ಹಾಗು ಸಂಭ್ರಮದಿಂದ ಆಯೋಜಿಸಲಾಯಿತು.







NATIONAL PUBLIC SCHOOL
ನ್ಯಾಷನಲ್ ಪಬ್ಲಿಕ್ ಸ್ಕೂಲ್
ಕೆಂಗೇರಿ, ಬೆಂಗಳೂರು










ಕರ್ನಾಟಕದ ಸಾಹಿತಿಗಳು
ಕನ್ನಡ ರಾಜ್ಯೋತ್ಸವ




ಕರ್ನಾಟಕದ ಜಾನಪದ ಕಲೆಗಳು